ಎಸ್.ಸಿ/ಎಸ್.ಟಿ.// ಟಿ.ಸಿ.ಹೆಚ್. ಬಿ.ಎಡ್. ಆದ ವಿದ್ಯಾರ್ಥಿಗಳ ಸಂಖ್ಯೆ.

3775 - ಶ್ರೀ ಆರ್.ಟಿ. ತಿಮ್ಮಾಪುರ (ಮುದೊಳ್) : ಮಾನ್ಯ ಕಾರ್ಮಿಕ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ?

ಅ) ಎಂಪ್ಲಾಯಮೆಂಟ್ ಎಕ್ಸ್‌ಚೆಂಜ್ ಆಫೀಸಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟವರ್ಗ ಬಿ.ಎಡ್. ಟಿ.ಸಿ.ಹೆಚ್. ಆದ ವಿದ್ಯಾರ್ಥಿಗಳು 1990-91ನೇ ಸಾಲಿನಲ್ಲಿ ರಿಜಿಸ್ಟರ್ ಮಾಡಿಸಿದವರ ಸಂಖ್ಯೆ ಎಷ್ಟು?

ಆ) ಇಲ್ಲಿಯವರೆಗೆ ಬಿ.ಎಡ್., ಟಿ.ಸಿ.ಹೆಚ್.ಆದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭ್ಯರ್ಥಿಗಳಿಗೆ ನೌಕರಿ ಅವಕಾಶ ಸಿಕ್ಕಿದೆಯೆ?

ಶ್ರೀ ಎ.ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಸಚಿವರು):

ಅ) ಬಿ.ಎಡ್ ಪದವೀಧರರ ಸಂಖ್ಯೆ : 1321
(ಪರಿಶಿಷ್ಟ ಜಾತಿ-1176 ಪರಿಶಿಷ್ಟ ಪಂಗಡ 145)
ಟಿ.ಸಿ.ಹೆಚ್. ಮಾಡಿದವರು ಸಂಖ್ಯೆ : 8124
(ಪರಿಶಿಷ್ಟ ಜಾತಿ-7377 ಪರಿಶಿಷ್ಟ ಪಂಗಡ -747)
(ಜೂನ್ 1991ರ ಅಂತ್ಯದವರೆಗೆ).

ಆ) ದಿನಾಂಕ 11-1-91ರ ವರೆಗೆ ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಎಲ್ಲಾ ಟಿ.ಸಿ.ಹೆಚ್ ಆದ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಅಭ್ಯರ್ಥಿಗಳನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಅಧಿಸೂಚಿತರಾದ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳಿಗೆ ಪುರಸ್ಕರಿಸಲಾಗಿದೆ. ಜುಲೈ 1990ರಿಂದ ಜೂನ್ 1991ರವರೆಗೆ ಉದ್ಯೋಗ ವಿನಿಮಯ ಕಛೇರಿಗಳಲ್ಲಿ ನೋಂದಾಯಿಸಿದ 3138 ಪರಿಶಿಷ್ಟ ಜಾತಿ ಹಾಗೂ 374 ಪರಿಶಿಷ್ಟ ವರ್ಗಕ್ಕೆ ಸೇರಿದ ಬಿ.ಎಡ್. ಅಭ್ಯರ್ಥಿಗಳನ್ನು ವಿವಿಧ ನೇಮಕಾತಿ ಆಯ್ಕೆ ಪ್ರಾಧಿಕಾರದಿಂದ ಅಧಿಸೂಚಿತವಾದ ಹುದ್ದೆಗಳಿಗೆ ಪುರಸ್ಕರಿಸಲಾಗಿದೆ.

ಕೈಗಾರಿಕಾ ಅಭಿವೃದ್ಧಿ ಮಂಡಳಿಯ ಕಾರ್ಯ.

1846 - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಪ್ರಾರಂಭವಾದುದು ಯಾವಾಗ.

ಆ) ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ನಿರ್ಮಾಣ ಮಾಡಿರುವ ಪ್ರದೇಶದ ಗ್ರಾಮದ ಹೆಸರುಗಳನ್ನು ತಾಲ್ಲೂಕು ಮತ್ತು ಜಿಲ್ಲಾವಾರು ವಿವರಗಳನ್ನೊದಗಿಸುವುದು, ಈ ಪ್ರದೇಶದಲ್ಲಿ ವಿಂಗಡಿಸಿರುವ ಒಟ್ಟು ನಿವೇಶನಗಳ ಸಂಖ್ಯೆ ಎಷ್ಟು, ಮಾಹಿತಿಗಳನ್ನು ಒದಗಿಸುವುದು.

ಇ) ಕೈಗಾರಿಕಾ ನಿವೇಶನಗಳನ್ನು ಮಾಡಲು ಸರ್ಕಾರದಿಂದ ಮತ್ತು ರಾಷ್ಟ್ರೀಕೃತ ಬ್ಯಾಂಕುಗಳಿಂದ ಪಡೆದ ಆರ್ಥಿಕ ಸೌಲಭ್ಯವೆಷ್ಟು ಬ್ಯಾಂಕುವಾರು ಮತ್ತು ವರ್ಷವಾರು ವಿವರವನ್ನು ಒದಗಿಸುವುದು.

ಈ) ಇದುವರೆವಿಗೂ ಕೈಗಾರಿಕಾ ನಿವೇಶನಗಳನ್ನು ಯಾವ ಯಾವ ಪಂಗಡದ ಜನಾಂಗದವರುಗಳಿಗೆ ಹಂಚಲಾಗಿದೆ, ಸದರಿಯವರಿಂದ ವಸೂಲಾದ ಹಣದ ಮೊತ್ತವೆಷ್ಟು.

ಉ) ಕೈಗಾರಿಕಾ ನಿವೇಶನಗಳ ಮಾರಾಟದಿಂದ ಬಂದ ಹಣದಿಂದ ಸರ್ಕಾರ ಮತ್ತು ಬ್ಯಾಂಕುಗಳಿಂದ ಪಡೆದ ಯಾವ ಯಾವ ಬ್ಯಾಂಕಿಗೆ ಸಾಲ ಮರುಪಾವತಿ